# ಪೂಜೆ ಯಾತಕೋ ಮನುಜ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 378.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 423.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** Singer has followed these lyrics.

ರಾಗ: ತೋಡಿ ತಾಳ: ರೂಪಕ

ಪೂಜೆ ಯಾತಕೋ, ಮನುಜ, ಪೂಜೆ ಯಾತಕೋ || ಪ ||
ಪೂಜೆಯಲಿ ನಿನ್ನ ಮನ ನಿಲ್ಲದಿದ್ದ ಮೇಲೆ ನಿನಗೆ || ಅಪ ||

ಭೂತದಯಾ ಪಶ್ಚಾತ್ತಾಪ
ನೀತಿಯೆಂಬುದು ಮತ್ತಿಲ್ಲ
ಮಾತಿನಲಿ ಜ್ಞಾನಿಯಲ್ಲ
ಕೋತಿ ಬುದ್ಧಿ ಬಿಡಲಿಲ್ಲ || 1 ||

ಹಾಕುವುದು ಸಾಧುವೇಷ
ಸಾಕುವುದು ಹಲವು ದೋಷ
ಬೇಕೇ ನಿನಗೆ ಒಳ್ಳೆ ಪದ
ಏಕೆ ಭ್ರಾಂತಿ ಉನ್ಮತ್ತ || 2 ||

ಪೂಜೆಯಲ್ಲಿ ಹೊಲೆಯನಲಿ (ಪೂಜೆಯಲ್ಲಿ ಪಾಪ ಬುದ್ಧಿ)
ಜಾಜಿ ತುಳಸಿ ಕೈಯಲಿ
ಮೂರ್ಜಗದೊಡೆಯ ಅವನು ಎಲ್ಲಿ
ಮಾರ್ಜಾಲನಂತೆ ನೋಟದಲಿ || 3 ||

ಆಸೆಯನು ಬಿಡಲಿಲ್ಲ
ಶೇಷಶಯನನ ಪೂಜೆಯಲ್ಲ
ಗಾಸಿಪಟ್ಟು ಮಾಡುತಿಯಲ್ಲ
ಮೋಸ ಹೋಗದೆ ತಿಳಿಯೊ ಎಲ್ಲ || 4 ||

ತಂದೆ ಪುರಂದರವಿಠಲನ
ಒಂದೆ ಮನದಿ ನೆನೆ ಅಣ್ಣಯ್ಯ
ಎಂದು ಕುಂದದ ಪದವನೀವ
ನಂದ ನಂದನ ತಂದೆ ಕೃಷ್ಣ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಒಳ್ಳೆ ಪದ** – ಸದ್ಗತಿ; ಉತ್ತಮವಾದ ಪದವಿ.

**ಮಾರ್ಜಾಲನಂತೆ** – ಬೆಕ್ಕಿನಂತೆ (ಬೂಟಕದ ಧ್ಯಾನ).

**ಎಂದು ಕುಂದದ ಪದ** – ಮುಕ್ತಿ.

**Classification:** Keerthane
**Ankita:** tande purandara vittala
**Location:** NA
**Category:** Bhakti
**Sub-Category:** bhakti, puje, nara, mana, jnana, koti, buddi, papa, tulasi, pushpa, loka, bekku, ase, Vishnu, mosa, Krishna,
**Pravachana:** NA
**Explanation:** NA